# ಮಾತು-ಕತೆ

◆ ನೀವು ಸಾಹಿತ್ಯದತ್ತ, ಅದರಲ್ಲೂ ಕವಿತೆಯತ್ತ ಸೆಳೆಯಲ್ಪಟ್ಟಿದ್ದು ಹೇಗೆ? ನಾಲ್ಕು ದಶಕಗಳ ನಿರಂತರ ಕಾವ್ಯಯಾನದಲ್ಲಿ ಆದ ಅನುಭವಗಳ ಬಗ್ಗೆ ಕೊಂಚ ಹೇಳಿ.

ಇದು ಆಕಸ್ಮಿಕವೆಂದೇ ಹೇಳಬೇಕು. ಬಾಲ್ಯದಲ್ಲಿ ಅಪ್ಪ ತನ್ನ ಹೆಗಲ ಮೇಲೆ ಕೂಡ್ರಿಸಿಕೊಂಡು ಜಾತ್ರೆಗಳಿಗೆ ಕರೆದೊಯ್ಯುತ್ತಿದ್ದ. ಪುರವಂತರ ಕುಣಿತ, ಭಜನಾಮೇಳ, ರಾತ್ರಿ ನಡೆಯುವ ನಾಟಕ ನನ್ನಲ್ಲಿ ಕುತೂಹಲ ಹುಟ್ಟಿಸುತ್ತಿದ್ದವು. ಅವ್ವ ಒಮ್ಮೆ ಹೇಳಿದ ನೆನಪು, ನಾನು ಹುಟ್ಟುವ ಮೊದಲು ಅಪ್ಪ ಭಜನಾಕಾರನಾಗಿದ್ದ, ಗೀಗೀ ಪದ ಹಾಡುತ್ತಿದ್ದ. ಅದಕ್ಕೆ ನಮ್ಮ ಮನೆಯಲ್ಲಿ ಇದ್ದ ಚಳ್ಳಂ ಹಲಗೆಗಳೇ ಸಾಕ್ಷಿಯಾಗಿದ್ದವು. ಇದರ ಜೊತೆ ಅವ್ವ ತನ್ನ ತೊಡೆಯ ಮೇಲೆ ನನ್ನನ್ನು ಮಲಗಿಸಿಕೊಂಡು ರಾಗವಾಗಿ ಬೀಸುಕಲ್ಲಿನ ಪದ ಹಾಡುತ್ತ ಜೋಳ ಬೀಸುತ್ತಿದ್ದಳು. ಇದು ಒಂದೆಡೆಯಾದರೆ, ಕಾಲೇಜಿನ ರಜೆಯ ದಿನಗಳಲ್ಲಿ ಆಡು, ಎಮ್ಮೆ, ಆಕಳು ಕಾಯುತ್ತ ಹಳ್ಳ, ಕೊಳ್ಳ, ಕೆರೆ, ಕಟ್ಟೆ, ಕಾಲುವೆಗಳಲ್ಲಿ ಆಡುತ್ತಾ, ಮಡ್ಡಿ,

